ಅ) ಖಾಲಿ ಇರುವ ಹುದ್ದೆ

1) ಕಿರಿಯ ಕಾಲೇಜು - 2
2) ಪ್ರೌಢಶಾಲೆ - 2

ಈ ಖಾಲಿ ಹುದ್ದೆಗಳನ್ನು ವರ್ಗಾವಣೆ:ಬಡ್ತಿ:ನೇಮಕಾತಿ ಮೂಲಕ ಆದ್ಯತೆ ಮೇರೆಗೆ ತುಂಬಲಾಗುವುದು.

ಸೂಳ್ಯ ತಾಲ್ಲೂಕಿನಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ

1095 (2372) ಶ್ರೀ ಅಂಗಾರ ಎಸ್. (ಸುಳ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನಲ್ಲಿ ವಿಶ್ವಬ್ಯಾಂಕ್ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ;

ಆ) ಕೊರೆಯಲಾದ ಕೊಳವೆ ಬಾವಿಗಳಲ್ಲಿ ಕೈಪಂಪು ಕೆಟ್ಟುಹೋದ ಕೊಳವೆ ಬಾವಿಗಳು ಎಷ್ಟು? (ಗ್ರಾಮವಾರು, ವರ್ಷವಾರು ಮಾಹಿತಿ ನೀಡುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ಸುಳ್ಯ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಕೊರೆದ ವಿವರ ಈ ರೀತಿ ಇದೆ.

ಮೊದಲನೇ ಹಂತ	1) ಅಜ್ಜಾವರ	: 12
	2) ಮಂಡೇಕೋಲು	: 05
ಎರಡನೇ ಹಂತ	1) ಕೊಲ್ಲಮೊಗರು	: 06
	2) ಪೆರುವಾಜೆ	: 10
	3) ಎಡಮಂಗಲ	: 01
		34

ಆ) ಕೊರೆದ ಎಲ್ಲಾ 34 ಕೊಳವೆ ಬಾವಿಗಳು ಸುಸ್ಥಿತಿಯಲ್ಲಿವೆ. ಆದಾಗ್ಯೂ ಗುತ್ತಿಗೆ ನಿಯಮಾವಳಿ ಪ್ರಕಾರ ಕೆಲಸ ಮುಗಿದ ದಿನದಿಂದ ಒಂದು ವರ್ಷದವರೆಗೆ ಡಿಪೆಕ್ಟ್ ಲಯಬಿಲಿಟಿ ಅವಧಿ ಇರುವುದರಿಂದ ರಿಪೇರಿ ಬಗ್ಗೆ ಮಾಹಿತಿ ಬಂದ ಕೂಡಲೇ ದುರಸ್ತಿ ಮಾಡಿಸಲಾಗುತ್ತಿದೆ. ತದನಂತರ, ಇವುಗಳನ್ನು ರಿಪೇರಿ ಮಾಡುವುದು, ಸುಸ್ಥಿತಿಯಲ್ಲಿಡುವುದು ಇತ್ಯಾದಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಜವಾಬ್ದಾರಿ ಆಗಿರುತ್ತದೆ.